# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 129 ರಲ್ಲಿ ದಿನಾಂಕ: 03.04.2021 ರಂದು, ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ: 03.04.2021ರಂದು ವಾರ್ಡ್ ಸಂಖ್ಯೆ 129ರ ಏಪ್ರಿಲ್ ಮಾಹೆಯ ಮೊದಲನೇ ಶನಿವಾರದ ವಾರ್ಡ್‌ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಹಾಜರಿದ್ದ ಸದಸ್ಯರು:–

1. ಶ್ರೀ.ವಿಶ್ವನಾಥ್, ಅಧೀಕ್ಷಕ ಅಭಿಯಂತರರು ದಾಸರಹಳ್ಳಿ ವಲಯ ಹಾಗೂ ವಾರ್ಡ್ ಸಂಖ್ಯೆ–129ರ ನೋಡಲ್ ಅಧಿಕಾರಿಗಳು.
2. ಶ್ರೀ ಜಯಕುಮಾರ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–129
3. ಶ್ರೀ ಮಂಜುನಾಥ ಆರ್ ಮಾರ್ಷಲ್ ವಾರ್ಡ್–129
4. ಶ್ರೀಮತಿ ಮೀನಾ ಎಸ್ ಘ.ತ್ಯಾ.ನಿ SWM ಸಂಪರ್ಕ ಕಾರ್ಯಕರ್ತರು, ವಾರ್ಡ್–129.
5. ಶ್ರೀಮತಿ ರಾಜೇಶ್ವರಿ ಎಸ್ ಘ.ತ್ಯಾ.ನಿ SWM ಸಂಪರ್ಕ ಕಾರ್ಯಕರ್ತರು, ವಾರ್ಡ್–129.
6. ಶ್ರೀಮತಿ ವಿಜಯ ರಾಘವನ್ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–129
7. ಶ್ರೀ ಸೂರಪ್ಪ ಸೂಪರ್ ವೈಸರ್ ವಾರ್ಡ್–129.
8. ಶ್ರೀಮತಿ ನಾಗತ್ನಮ್ಮ ಸೂಪರ್ ವೈಸರ್ ವಾರ್ಡ್–129.
9. ಶ್ರೀ ರಘು ಸೂಪರ್ ವೈಸರ್ ವಾರ್ಡ್–129.
10. ಶ್ರೀ ಬಾಲು ಸೂಪರ್ ವೈಸರ್ ವಾರ್ಡ್–129.
11. ಶ್ರೀಮತಿ ಕಮಲಮ್ಮ, ಲಲಿತಾ, ಗಾಯತ್ರಿ, ಸುವರ್ಣಮ್ಮ, ಪ್ರಭಾ ಒಣ ಕಸ ಸಂಗ್ರಹಣಾ ಗುತ್ತಿಗೆ ಪಡೆದ ಮಹಿಳಾ ಸ್ವಸಹಾಯ ಸಂಘದ ಸದಸ್ಯರು
12. ರಾಮಣ್ಣ ಆರ್.ಡಬ್ಲ್ಯೂ.ಎ ಎನ್.ಜಿ.ಇ.ಎಫ್ ಬಡಾವಣೆ ಮಲ್ಲತ್ತಹಳ್ಳಿ.
13. ಪುರುಷೋತ್ತಮ್, ಡಿ ಗ್ರೂಪ್ ಬಡಾವಣೆಯ ನಿವಾಸಿ
14. ಘೌಸ್ ಪಾಷಾ, ಕೆಂಗುಂಟೆ ನಿವಾಸಿ
15. ಮಾಲಾ ಗೌಡ ಕೆಬ್ಬೆಹಳ್ಳ ನಿವಾಸಿ.

ವಾರ್ಡ್ ಸಂಖ್ಯೆ–129ರ ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

## ❖ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ವಿಷಯಗಳು

- ಡಿ ಗ್ರೂಪ್ ಬಡಾವಣೆಯ ನಿವಾಸಿಯಾದ ಶ್ರೀ ಪುರುಷೋತ್ತಮ್ ರವರು ಕುವೆಂಪು ಪಾರ್ಕ್ ಹತ್ತಿರ ಕಸ ಸುರಿಯುತ್ತಿರುವುದರಿಂದ ಬ್ಲಾಕ್ ಸ್ಪಾಟ್ ಉಂಟಾಗುತ್ತಿದ್ದು ಸೂಕ್ತ ಕ್ರಮ ವಹಿಸಲು ಸಭೆಯಲ್ಲಿ ಕಿರಿಯ ಆರೋಗ್ಯ ಪರಿವೀಕ್ಷಕರಲ್ಲಿ ಕೋರಲು ತಿಳಿಸಿದ್ದರಂತೆ ಕ್ರಮ ವಹಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.
  ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–129
- ಒಣ ಕಸ ಸಂಗ್ರಹಿಸಲು ಹೊಸ ಆಟೋ ಟಿಪ್ಪರ್ ಗಳು ಸರಬರಾಜು ಆಗಿದ್ದು, Tripatrate Agreement with Resources Organization ಅನ್ನು ಕೂಡಲೇ ಮಾಡಿಕೊಂಡು ಒಣ ಕಸ ವಿಂಗಡಿಸುವಂತೆ ಹಾಗೂ Implementation Plan ಅನ್ನು ತಯಾರಿಸಿ ನಿರ್ವಹಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರಿಗೆ ದೂರವಾಣಿ ಮುಖಾಂತರ ನೋಡಲ್ ಅಧಿಕಾರಿಗಳು ಸೂಚಿಸಿದರು.
- ಸದರಿ ವಾರ್ಡಿನಲ್ಲಿ ಪ್ರತ್ಯೇಕವಾಗಿ ಒಣಕಸವನ್ನು ಸಂಗ್ರಹಿಸಲು ಅನುಮೋದನೆ ಪಡೆದಿರುವುದಾಗಿ ಕಿರಿಯ ಆರೋಗ್ಯ ನಿರೀಕ್ಷಕರು ತಿಳಿಸಿರುವಂತೆ, ಕೂಡಲೇ ಒಣಕಸವನ್ನು ವಾರ್ಡ್ ಮಟ್ಟದಲ್ಲಿನ ಎಲ್ಲಾ ಬ್ಲಾಕ್‌ಗಳಲ್ಲಿ ಸಂಗ್ರಹಿಸಲು ವಾಹನಗಳಿಗೆ Implementation plan ಸಿದ್ದಪಡಿಸಿ ಸಲ್ಲಿಸಲು ಸ.ಕಾ.ನಿ.ಅ ಘನತ್ಯಾಜ್ಯ ನಿರ್ವಹಣೆ–ರಾ.ರಾ.ನಗರ ರವರಿಗೆ ತಿಳಿಸಲಾಗಿದೆ.
- ಶ್ರೀಗಂಧದ ಕಾವಲಿನ Lorry point ನಲ್ಲಿ ತ್ಯಾಜ್ಯ ಸಾಗಿಸಿದ ನಂತರ ಸದರಿ ಪ್ರದೇಶದ ಸ್ವಚ್ಛತೆ ಕಾಪಾಡದಿರುವ ಬಗ್ಗೆ ಸ್ಥಳೀಯ ನಿವಾಸಿಗಳು ದೂರು ನೀಡಿದ ಹಿನ್ನೆಲೆಯಲ್ಲಿ, ಈ ಹಿಂದಿನ ಸಭೆಯಲ್ಲೂ ಇದೇ ರೀತಿ ದೂರು ಕೇಳಿ ಬಂದ ಕಾರಣ ಸಂಬಂಧಿಸಿದ ಸರಬರಾಜುದಾರರು/ಏಜೆನ್ಸಿ ಯವರಿಗೆ ದಂಡ ವಿಧಿಸಿ ಕ್ರಮವಹಿಸಲು ಸೂಚಿಸಲು ಹಾಗೂ ಮುಂದಿನ ಸಭೆಯಲ್ಲಿ ವಿವರ ನೀಡಲು ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರಿಗೆ ದೂರವಾಣಿ ಮುಖಾಂತರ ನೋಡಲ್ ಅಧಿಕಾರಿಗಳು ಸೂಚಿಸಿದರು.
- ಕೆಂಗುಂಟೆಯಲ್ಲಿ ಆಟೋ ಟಿಪ್ಪರ್ ಗಳು ಸರಿಯಾಗಿ ಹೋಗದೇ ಇರುವ ಕಾರಣ ಬ್ಲಾಕ್ ಸ್ಪಾಟ್ ಗಳು ಜಾಸ್ತಿಯಾಗುತ್ತಿದೆಯೆಂದು ಅಲ್ಲಿನ ನಿವಾಸಿಯೊಬ್ಬರು ದೂರಿದ ಮೇರೆಗೆ ಸಂಬಂಧಪಟ್ಟ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಈ ಬಡಾವಣೆಯಲ್ಲಿ ನಿಯೋಜಿಸಲಾಗಿರುವ ಹಸಿ/ಒಣ ತ್ಯಾಜ್ಯದ ವಾಹನಗಳನ್ನು ಸಮರ್ಪಕವಾಗಿ ನಿಯೋಜಿಸುತ್ತಿರುವ ಬಗ್ಗೆ ಖುದ್ದು ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು ಹಾಗೂ ಮುಂದಿನ ಸಭೆಯಲ್ಲಿ ಮಾಹಿತಿಯನ್ನು ನೀಡಲು ಸೂಚಿಸಲಾಯಿತು
- Link worker ರವರಿಗೆ ಈ ಹಿಂದಿನ ಸಭೆಯಲ್ಲಿ ಸೂಚಿಸಿದಂತೆ ಪ್ರತೀ ಬ್ಲಾಕ್ ನಿಂದ ಸಂಗ್ರಹಿಸಲಾಗಿರುವ ಹಸಿ ತ್ಯಾಜ್ಯದ ವಿವರಗಳನ್ನು ಸಭೆಗೆ ನೀಡಿದರು ಅದರ ಪೈಕಿ ಅನೇಕ ಆಟೋಗಳಲ್ಲಿ ಸಾಮರ್ಥಕ್ಕಿಂತ ಕಡಿಮೆ ತ್ಯಾಜ್ಯ ಸಂಗ್ರಹಿಸುತ್ತಿರುವುದು ಕಂಡು ಬಂದಿದ್ದು ತತ್ಸಂಬಂಧ ಸ.ಕಾ.ಅ (ಘ.ತ್ಯಾ.ನಿ) ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು ಆಟೋಗಳ ಸಾಮರ್ಥ್ಯಕ್ಕೆ ತಕ್ಕಂತೆ ಹಸಿ ತ್ಯಾಜ್ಯವನ್ನು ಸಂಗ್ರಹಿಸುತ್ತಿರುವ ಆಟೋ ಟಿಪ್ಪರ್ ಗಳಿಗೆ ನಿಗಾ ವಹಿಸಿ, ಎಲ್ಲಾ ಮನೆ ಮನೆಯಿಂದ ಕಸ ಸಂಗ್ರಹಿಸುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ದೂರವಾಣಿ ಮುಖಾಂತರ ಸೂಚಿಸಲಾಗಿರುತ್ತದೆ.

## ❖ ವಿದ್ಯುತ್ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು

- ಎನ್.ಜಿ.ಇ.ಎಫ್ ಬಡಾವಣೆಯಲ್ಲಿ ಬೀದಿ ದೀಪಗಳು ಸರಿಯಾದ ಸಮಯಕ್ಕೆ ON/OFF ಆಗುತ್ತಿಲ್ಲವೆಂದು ಸಾರ್ವಜನಿಕರು ದೂರು ನೀಡಿ ಸದರಿ ಗುತ್ತಿಗೆದಾರರಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿದರು
  ಕ್ರಮ ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್)

ಸಹಾಯ ಆಪ್ ನಲ್ಲಿ ದಾಖಲಾಗಿರುವ ದೂರುಗಳಿಗೆ ಸಂಬಂಧಿಸಿದಂತೆ ಆದ್ಯತೆ ಮೇರೆಗೆ ಕ್ರಮ ವಹಿಸಲು ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೂ ಸೂಚಿಸುತ್ತಾ ಅಂದಿನ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಮೇಲಿನ ದೂರುಗಳಿಗೆ ಸಂಬಂಧಿಸಿದ ಅಧಿಕಾರಿಗಳು, ಅವರ ವ್ಯಾಪ್ತಿಯ ದೂರುಗಳಿಗೆ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಕೈಗೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ತಪ್ಪದೇ ವರದಿ ಮಾಡಲು ತಿಳಿಸಿದೆ.

ಸಹಿ/–
ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ–129

ಸಹಿ/–
ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ–129

***ಪ್ರತಿಯನ್ನು:***

1. ಆಪ್ತಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲು ಕೋರಿದೆ.
2. ಜಂಟಿ ಆಯುಕ್ತರು ರಾರಾನಗರ ವಲಯರವರ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
4. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.
7. ಕಛೇರಿ ಪ್ರತಿ.